# ತುಮಕೂರು ವಿಶ್ವವಿದ್ಯಾನಿಲಯ

**ಪರೀಕ್ಷಾ ಭವನ, ಬಿ.ಹೆಚ್. ರಸ್ತೆ, ತುಮಕೂರು–572 103 ☎:0816–2255650,2273511 ಫ್ಯಾಕ್ಸ್:0816–2270719**


ಸಂಖ್ಯೆ:ತುವಿ:ಪವಿ:2026–27 ದಿನಾಂಕ:26.05.2026

## : ಸುತ್ತೋಲೆ :

**ವಿಷಯ :** 19 ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಸಂಬಂಧ ಪೂರ್ವಭಾವಿ ಸಭೆ ಆಯೋಜಿಸಿರುವ ಕುರಿತು.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ಹತ್ತೊಂಭತ್ತನೇ ವಾರ್ಷಿಕ ಘಟಿಕೋತ್ಸವ ಸಮಾರಂಭವು ದಿನಾಂಕ:03.06.2026 ರ ಬುಧವಾರದಂದು ನಡೆಯಲಿದ್ದು, ಸದರಿ ಸಮಾರಂಭಕ್ಕೆ ಆಹ್ವಾನಿತರಾದ ಡಿ.ಲಿಟ್., ಪಿಹೆಚ್.ಡಿ. ಅಭ್ಯರ್ಥಿಗಳು, ಚಿನ್ನದ ಪದಕ ಮತ್ತು ನಗದು ಬಹುಮಾನ ಪಡೆಯುವ ವಿದ್ಯಾರ್ಥಿಗಳು, ರ್‍ಯಾಂಕ್ ವಿಜೇತರುಗಳಿಗೆ ಪಾಸ್‌ಗಳನ್ನು ವಿತರಿಸಲು ಹಾಗೂ ಘಟಿಕೋತ್ಸವ ಸಮಾರಂಭದ ಸಂಬಂಧ ಇನ್ನಿತರೆ ಸೂಚನೆಗಳನ್ನು ನೀಡುವ ಸಲುವಾಗಿ **ದಿನಾಂಕ: 29.05.2026 ರ ಶುಕ್ರವಾರದಂದು ಮಧ್ಯಾಹ್ನ 03.00 ಘಂಟೆಗೆ ಪರೀಕ್ಷಾ ಭವನ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು** ಇಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದ್ದು, **ಸದರಿ ಸಭೆಗೆ ಸೂಚಿತ ಅಭ್ಯರ್ಥಿಗಳು ಕಡ್ಡಾಯವಾಗಿ ಹಾಜರಾಗುವಂತೆ** ಈ ಮೂಲಕ ಸೂಚಿಸಲಾಗಿದೆ.

ಸಭೆಗೆ ಆಗಮಿಸಲು ಸಾಧ್ಯವಾಗದ ವಿದ್ಯಾರ್ಥಿಗಳು ತಮ್ಮ ಪರವಾಗಿ ಯಾರಾದರೂ ಸಭೆಗೆ ಆಗಮಿಸಲು ಇಚ್ಛಿಸಿದಲ್ಲಿ ತಮ್ಮ ಹಾಗೂ ಸದರಿಯವರ ಗುರುತಿನ ಚೀಟಿ ಮತ್ತು ತಾವು ನೀಡುವ ಒಂದು ಪತ್ರದೊಂದಿಗೆ ಸಭೆಯಲ್ಲಿ ಭಾಗವಹಿಸಬಹುದಾಗಿದೆ.

**ಕಡ್ಡಾಯವಾಗಿ ಎಲ್ಲಾ ವಿದ್ಯಾರ್ಥಿಗಳು ಸದರಿ ಸಭೆಗೆ ಹಾಜರಾಗಿ ಘಟಿಕೋತ್ಸವ ಸಮಾರಂಭಕ್ಕೆ ಹಾಜರಾಗಲು ಪಾಸ್‌ಗಳನ್ನು ಸ್ವೀಕರಿಸಬೇಕೆಂದು ಸೂಚಿಸಲಾಗಿದೆ. ಸದರಿ ದಿನದ ಹೊರತಾಗಿ ಬೇರೆ ದಿನಗಳಲ್ಲಿ ಪಾಸ್‌ಗಳನ್ನು ವಿತರಿಸುವುದಿಲ್ಲ.**

26/5
**ಕುಲಸಚಿವರು (ಮೌಲ್ಯಮಾಪನ)**
ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಗೆ,**

1. ಡಿ.ಲಿಟ್., ಡಿ.ಎಸ್ಸಿ., ಪಿಹೆಚ್.ಡಿ. ಅಭ್ಯರ್ಥಿಗಳು.
2. ಚಿನ್ನದ ಪದಕ ಮತ್ತು ನಗದು ಬಹುಮಾನ ಪಡೆಯುವ ವಿದ್ಯಾರ್ಥಿಗಳು.
3. ವಿವಿಧ ಸ್ನಾತಕ/ಸ್ನಾತಕೋತ್ತರ ಪದವಿಗಳಲ್ಲಿನ ರ್‍ಯಾಂಕ್ ವಿಜೇತರು.

**ಪ್ರತಿ :** ಕಚೇರಿ ಪ್ರತಿ